


ಕಲೆ: ಶ್ರೀಪಾದ್

ಬೆಳಿಗ್ಗೆ ಎದ್ದವನೇ ಗರುಡ ಹಿತ್ತಲಬಾಗಿಲು ತೆರೆದು ಬಚ್ಚಲ ಬಾಗಿಲಲ್ಲಿ ಏನೋ ನೆನಪಾದಂತೆ ತಟ್ಟನೇ ನಿಂತ. ಈ ದಿನ ರಜೆ ಎಂಬುದೂ ಸಹ ನೆನಪಾಗದಂತೆ ಈ ಏಳುವ ಅಭ್ಯಾಸದಿಂದ ಬೆಳಗ್ಗಿನ ಸಕ್ಕರೆ ಸವಿ ನಿದ್ದೆ ಹಾಳಾಗುತ್ತಿದೆ ಎನ್ನಿಸಿತು ಅವನಿಗೆ. ಬ್ರಷ್‌ಗೆ ಪೇಸ್ಟ್ ಹಾಕಿಕೊಂಡು ಬಂದವನೇ ಬಾವಿಕಟ್ಟೆಯ ಮೇಲೆ ಕುಳಿತ. ಬೆಳಗ್ಗೆ ಎದ್ದಾಕ್ಷಣದಿಂದ ಮತ್ತೆ ರಾತ್ರಿ ನಿದ್ದೆಯಿಂದ ಭಾರವಾಗಿ ಕಣ್ಣು ಮುಚ್ಚುವವರೆಗೆ ತಲೆಯೊಳಗೆ